**ದಿನಾಂಕ: 14-11-2025ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ವಾಟೀ ಸವಾಲು: 1 ಮತ್ತು 2ನೇ ಎದುರುದಾರರ ಪರ ಶ್ರೀ ಬಿ.ಎಸ್.ಕೆ. ವಕೀಲರಿಂದ**

1. ಅಪಘಾತವಾದ ದಿನ ಮೋಟಾರ್ ಸೈಕಲ್ ಮೇಲೆ ಮೂರು ಜನ ಕುಳಿತು ಹೋಗುತ್ತಿದ್ದೀರಿ ಎಂದರೆ ಇಬ್ಬರು ಎಂದು ಉತ್ತರಿಸುತ್ತಾರೆ. ಅವರು ಯಾರು ಎಂದರೆ ನಾನು ಮತ್ತು ಮಲ್ಲಣ್ಣ ಎಂದು ಉತ್ತರಿಸುತ್ತಾರೆ. ಮೋಟಾರಸೈಕಲನ್ನು ಆ ದಿನ ನಾನೇ ಚಲಾಯಿಸುತ್ತಿದ್ದೆನು. ನಿಮಗೆ ವಾಹನ ಚಲಾಯಿಸಲು DL ಇದೆಯಾ ಎಂದರೆ ನಾವು ಒಕ್ಕಲುತನ ಮಾಡುವವರು ಎಂದು ಉತ್ತರಿಸುತ್ತಾರೆ. ಸಾಥಖೇಡ ರಸ್ತೆ ಕಚ್ಚಾ ರಸ್ತೆ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಪಘಾತವಾದ ದಿನ ಮೋಟಾರ್ ಸೈಕಲ್ ಮೇಲೆ ಮೂರು ಜನ ಕುಳಿತು ಹೋಗುತ್ತಿದ್ದರೂ ಸಹ ಇಬ್ಬರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಅಪಘಾತವಾದ ಎಷ್ಟು ದಿನಗಳ ನಂತರ ಈ ಕೇಸು ಹಾಕಿದ್ದೀರಿ ಎಂದರೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ಅಪಘಾತವಾದ ದಿನ ಮೋಟಾರ್ ಸೈಕಲ್ ಮೇಲೆ ಮೂರು ಜನ ಕುಳಿತು ಹೋಗುತ್ತಿದ್ದು ನಿಮ್ಮ ಆಯ ತಪ್ಪಿ ಕೆಳಗಡೆ ಬಿದ್ದು ಅಪಘಾತಪಡಿಸಿಕೊಂಡಿರುತ್ತೀರಿ ಎಂದರೆ ಸೈಡಿಗೆ ನಾವು ಹೋಗುತ್ತಿದ್ದೆವು ಸೈಡಿಗೆ ಬಂದು ಗುದ್ದಿದ್ದಾನೆ ಎಂದು ಉತ್ತರಿಸುತ್ತಾರೆ. ನಿಮ್ಮ ಮೋಟಾರ್ ಸೈಕಲ್ ಗೆ ಇನ್ಸುರೆನ್ಸ್ ಇದೆಯೆ ಎಂದರೆ ಇದೆ ಎಂದು ಉತ್ತರಿಸುತ್ತಾರೆ. ಸದರಿ ಇನ್ಸುರೆನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಟಂಟಂ ಬಂದು ನಿಮಗೆ ಅಪಘಾತಪಡಿಸಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹತ್ತಿರ ಡಿ.ಎಲ್. ಮತ್ತು ಇನ್ಸುರೆನ್ಸ್ ಇಲ್ಲದ ಸಲುವಾಗಿ ಟಂಟಂ ವಾಹನ ಮೇಲೆ ಸುಳ್ಳು ಕೇಸು ಹಾಕಿರುತ್ತೀರಿ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಟಂಟಂ ವಾಹನದ ಮೇಲೆ ಸುಳ್ಳು ಕೇಸ್ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ವಾಹನದಿಂದ ನೀವೇ ಬಿದ್ದು ಅಪಘಾತಪಡಿಸಿಕೊಂಡಿದ್ದರೂ ಸಹ ಟಂಟಂ ವಾಹನದ ಚಾಲಕನ ಮೇಲೆ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ. 1 ಮತ್ತು 2ನೇ ಎದುರುದಾರರ ಯಾವುದೇ

ತಪ್ಪಿಲ್ಲದಿದ್ದರೂ ಸಹ ಅವರ ಅವರ ಮೇಲೆ ಸುಳ್ಳು ಕೇಸ್ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ಆ ದಿನ ನಿಮ್ಮ ವಾಹನ ಎಷ್ಟು ವೇಗವಾಗಿ ಹೋಗುತ್ತಿತ್ತು ಎಂದರೆ ನಿಧಾನವಾಗಿ ಹೋಗುತ್ತಿತ್ತು ಎಂದು ಉತ್ತರಿಸುತ್ತಾರೆ. ನಿಮ್ಮ ಮೋಟಾರ ಸೈಕಲನ್ನು ಅತಿವೇಗವವಾಗಿ ಚಲಾಯಿಸಿಕೊಂಡು ಹೋಗಿ ನೀವೇ ಅಪಘಾತಪಡಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ